**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಅಪರ ಆಯುಕ್ತರ ಕಚೇರಿ,ಗುಲಬರ್ಗಾ.**

ಸಂಖ್ಯೆ:ಸಿ2(6)ಆಡಳಿತ/ಮುಖ್ಯ ಶಿಕ್ಷಕರ/ಬಡ್ತಿ/24 /2013-14 ದಿನಾಂಕ 16-08-2014.

**:: ಜ್ಞಾಪನ ::**

**ವಿಷಯ:-** ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ವೃಂದದ ಹುದ್ದೆಗಳಿಗೆ ಬಡ್ತಿ ನೀಡುವ ಬಗ್ಗೆ.

**ಉಲ್ಲೇಖ:-** 1.ಅಪರ ಆಯುಕ್ತರು ಸಾ.ಶಿ.ಇ ಬೆಂಗಳೂರು ರವರ ಅಧಿಕೃತ ಜ್ಞಾಪನ ಸಂಖ್ಯೆ ಸಿ1(4):ಮುಶಿ:ಹುಭರ್ತಿ:22:2012-13 ದಿನಾಂಕ 01.08.2013.

2.ಈ ಕಛೇರಿಯ ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿ ದಿನಾಂಕ 03.06.2013.

3. ದಿನಾಂಕ 14-08-2013 ರಂದು ನಡೆದ ಇಲಾಖಾ ಮುಂಬಡ್ತಿ ಸಭೆ ನಿರ್ಣಯದಂತೆ.

-- -- --

ಉಲ್ಲೇಖ-01 ರ ಅಧಿಕೃತ ಜ್ಞಾಪನಾದಂತೆ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರನ್ನು ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಪ್ರಕರಣಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರ ಮಾಡಬಹುದಾದಂತಹ ಎಲ್ಲಾ ಕ್ರಮಗಳನ್ನು ಸದರಿ ವೃಂದಗಳ ಹುದ್ದೆಗಳಿಗೆ ನೇರ ನೇಮಕಾತಿ/ಬಡ್ತಿ ಇತ್ಯಾದಿ ಕೈಗೊಳ್ಳುವುದಲ್ಲದೆ ನಿಯಮಾನುಸಾರ ಸ್ಥಾಯಿ ಆದೇಶದನ್ವಯ ಅವರ ಮೇಲಿನ ನಿಯಂತ್ರಣ/ಮೇಲುಸ್ತುವಾರಿ ಲಭ್ಯವಾಗಬಹುದಾದ ಸೌಲಭ್ಯಗಳ ಮಂಜೂರಾತಿ ನೀಡುವ ಬಗ್ಗೆ ಸರ್ಕಾರದ ಆದೇದಂತೆ ಕ್ರಮ ಕೈಗೊಳ್ಳಲು ತಿಳಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ-02 ರಂತೆ ಗುಲಬರ್ಗಾ ವಿಭಾಗದಲ್ಲಿನ ತಾತ್ಕಾಲಿಕ ಅಂತಿಮ ಪಟ್ಟಿ ಪ್ರಕಟಿಸಲಾಗಿದೆ. ದಿನಾಂಕ 14-08-2013 ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ನಿರ್ಣಯದಂತೆ ವಿಭಾಗದಲ್ಲಿನ 96 ಅರ್ಹ ಪ್ರೌಢ ಶಾಲಾ ಶಿಕ್ಷಕರಿಗೆ ದಿನಾಂಕ 21-08-2013 ರಂದು ಮುಖ್ಯ ಶಿಕ್ಷಕರ ಹುದ್ದೆಗೆ ಕೌನ್ಸಿಲಿಂಗ ಮೂಲಕ ಬಡ್ತಿ ನೀಡಲು ದಿನಾಂಕ ನಿಗದಿಪಡಿಸಲಾಗಿದ್ದು, ಇದರೊಂದಿಗೆ ಲಗತ್ತಿಸಿದ ಪಟ್ಟಿಯಲ್ಲಿ ಪ್ರಕಟಿಸಿದಂತೆ ಅರ್ಹ ಶಿಕ್ಷಕರನ್ನು ದಿನಾಂಕ 21.08.2013 ರಂದು ಬೆಳಿಗ್ಗೆ 11.00 ಗಂಟೆಗೆ ಅರ್ಹ ಪ್ರೌಢಶಾಲಾ ಶಿಕ್ಷಕರು ಸದರಿ ದಿನದಂದು ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ ಸಭಾ ಭವನದಲ್ಲಿ ಹಾಜರಿರಲು ಸಂಬಂಧಿಸಿದ ಶಿಕ್ಷಕರಿಗೆ ಮಾಹಿತಿ ಒದಗಿಸುವ ಕುರಿತು ತಮ್ಮ ತಮ್ಮ ಜಿಲ್ಲೆಯ ಜಿಲ್ಲಾ ಪತ್ರಿಕೆಗಳಲ್ಲಿ ಪ್ರಚಾರ ನೀಡಲು ತಿಳಿಸಿದೆ.

ಮುಂದುವರೆದು ಈಗಾಗಲೇ ನಿಯಮ-32 ರಡಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರಿಗೆ ಹಾಲಿ ಕೆಲಸ ನಿರ್ವಹಿಸುತ್ತಿರುವ ಸ್ಥಳದಲ್ಲಿಯೇ ಸ್ಥಳ ನಿಯುಕ್ತಿಗೊಳಿಸುತ್ತಿರುವುದರಿಂದ ಸದರಿ ದಿನದಂದು ನಡೆಯುವ ಕೌನ್ಸಿಲಿಂಗಿಗೆ ಹಾಜರಾಗುವಂತಿಲ್ಲ.

**ಒಂದು ವೇಳೆ ಸದರಿ ದಿನಾಂಕದಂದು ನಡೆಯುವ ಕೌನ್ಸಲಿಂಗಿಗೆ ಹಾಜರಾಗದಿದ್ದಲ್ಲಿ, ಫ್ರಾಕ್ಸಿ ಕೌನ್ಸಿಲಿಂಗ ಮೂಲಕ ಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಗುವುದು.**

(ಸೈಯದ್ ಅಬ್ದುಲ್ ರಬ್)
**ಅಪರ ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ**

16/8

**ಪ್ರತಿಯನ್ನು:-**

1. ವಿಭಾಗದ ಎಲ್ಲಾ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ/ ರಾಯಚೂರು/ ಬಳ್ಳಾರಿ/ಕೊಪ್ಪಳ/ಬೀದರ/ಯಾದಗೀರ ರವರ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಹಾಗೂ ಧಾರವಾಡ ರವರಿಗೆ ಮಾಹಿತಿಗಾಗಿ
3. ಕಛೇರಿ ಪ್ರತಿ